**ಸಾಕ್ಷಿಯನ್ನು ದಿಃ 01.09.2025 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಟಿ ಎನ್ ಆರ್ ವಕೀಲರಿಂದಃ**

1.ಲಲಿತಮ್ಮರವರು ಆರೋಗ್ಯವಾಗಿಲ್ಲ. ಅವರು ಆರೋಗ್ಯವಾಗಿಲ್ಲ ಎಂಬ ಬಗ್ಗೆ ಯಾವುದೇ ದಾಖಲೆಗಳನ್ನು ಹಾಜುರುಪಡಿಸಿಲ್ಲ. ಸಾಕ್ಷಿಯು ಮುಂದುವರೆದು ಅವರಿಗೆ 92 ವರ್ಷ ವಯಸ್ಸಾಗಿದೆ ಎನ್ನುತ್ತಾರೆ. ನಿಪಿ.10 ದಾಖಲೆಯನ್ನು ಇತ್ತೀಚೆಗೆ ಮಾಡಿ ಕೊಟ್ಟಿದ್ದಾರೆ ದಿನಾಂಕ ವರ್ಷ ನೆನಪಿಲ್ಲ. ನಿಪಿ.10 ನ್ನು ಯಾವ ಸಂದರ್ಭದಲ್ಲಿ ಮಾಡಿ ಕೊಟ್ಟಿದ್ದಾರೆ ಎಂದರೆ ಸಾಕ್ಷಿಯು ಹೆಚ್ಆರ್ ಸಿ ದಾವೆ ನಡೆಸಲು ಮೊದಲು ಮಾಡಿ ಕೊಟ್ಟಿದ್ದು ಅದು ಸರಿ ಬರಲಿಲ್ಲ ಎಂದು ಇತ್ತೀಚೆಗೆ ಮತ್ತೊಂದು ಜಿ.ಪಿ.ಎ ಮಾಡಿ ಕೊಟ್ಟಿದ್ದಾರೆ ಎನ್ನುತ್ತಾರೆ. ನಿಪಿ.10ನ್ನು ಆಗಸ್ಟ್ 2025 ರಲ್ಲಿ ಮಾಡಿಕೊಟ್ಟಿದ್ದಾರೆ. ಅದನ್ನು ನನ್ನ ವಕೀಲರಾದ ಹೆಚ್ ಆರ್ ರಮೇಶ್ ರವರು ಮಾಡಿಸಿಕೊಟ್ಟಿರುತ್ತಾರೆ. ನೋಟರಿಯನ್ನು ನಮ್ಮ ವಕೀಲರು ಮಾಡಿಸಿದ್ದಾರೆ. ನಿಪಿ.10 ರಲ್ಲಿ ನಿಮ್ಮ ವಕೀಲರ ಸಹಿ ಇಲ್ಲ ಎಂದರೆ ಸಾಕ್ಷಿಯು ದಾಖಲೆಗಳನ್ನು ಪರಿಶೀಲಿಸಿ ಇದನ್ನು ನಾವೇ ಮಾಡಿಸಿಕೊಂಡಿದ್ದೇವೆ ಆದ ಕಾರಣ ವಕೀಲರ ಸಹಿ ಇಲ್ಲ ಎನ್ನುತ್ತಾರೆ. ನೋಟರಿ ಬಳಿ ನಮ್ಮ ವಕೀಲರೆ ಕರೆದುಕೊಂಡು ಹೋಗಿರುತ್ತಾರೆ ಅವರ ಹೆಸರು ನನಗೆ ಗೊತ್ತಿಲ್ಲ. ನೋಟರಿ ಬಳಿ ನಾನೊಬ್ಬಳೆ ಹೋಗಿದ್ದೆ.

2. ನಿಪಿ.10 ಜಿಪಿಎ ಈ ದಾವೆ ಹೂಡುವಾಗ ನನಗೆ ಕೊಟ್ಟಿರಲಿಲ್ಲ ಆಗ ಬೇರೆ ಜಿಪಿಎ ಇತ್ತು ಎನ್ನುತ್ತಾರೆ. ನಾನು ಮೊದಲು ಹಳೆಯ ಜಿಪಿಎ ಆದಾರದಲ್ಲಿ ದಾವೆ ಹೂಡಿದ್ದು ಈಗ ನಿಪಿ.10 ಜಿಪಿಎ ಆದಾರದಲ್ಲಿ ದಾವೆ ನಡೆಸುತ್ತಿದ್ದೇನೆ. ಹಳೆಯ ಜಿಪಿಎಯನ್ನು ನನ್ನ ವಕೀಲರು ಹಾಜುರುಪಡಿಸಿರುತ್ತಾರೆ. ದಾವೆ ಆಸ್ತಿಯ ಬಗ್ಗೆ ಮಾಲಿಕತ್ವ ಇನ್ನು ನಿರ್ಧಾರ ಆಗಿಲ್ಲ ಎಂದರೆ ಸರಿ. ಈ ಬಗ್ಗೆ ಒ.ಎಸ್ 1057/2012 ದಾವೆ ಇತ್ಯರ್ತಕ್ಕೆ ಬಾಕಿ ಇದೆ ಎಂದರೆ ಸರಿ.

ಮರುವಿಚಾರಣೆಃ ಇಲ್ಲ

(ನನ್ನ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ.

ಸಹಿ/-

ಹೆಚ್ಚುವರಿ ಲಘು ವ್ಯವಹಾರಗಳ ನ್ಯಾಯಾಧೀಶರು
ಮೈಸೂರು.